**ಮೂ.ದಾ.ನಂ.90/2017**

ಪಿ.ಡಬ್ಲ್ಯು.1

(ದಿಃ 15/10/2024 ರಂದು ಆದ ಮಧ್ಯಂತರ ಆದೇಶದ ಮೇರೆಗೆ ಇಂದು ದಿನಾಂಕ: **11–11–2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್.ಜಿ.ಎನ್. ವಕೀಲರಿಂದಃ**

ನಮ್ಮ ಮನೆಯು ವಾದಿಯ ಮನೆಯಿಂದ ಅಂದಾಜು 500 ಮೀಟರ ದೂರದಲ್ಲಿ ಇದೆ. ವಾದಿಯ ದಾವಾ ಆಸ್ತಿಯನ್ನು ಯಾವಾಗ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ ಜಾಗದ ಸರ್ವೆ ನಂ. ನನಗೆ ಗೊತ್ತಿಲ್ಲ. ಸದ್ರಿ ವಾದಿಯ ಜಾಗವು ಅಂದಾಜು 1 ಎಕರೆ ಜಾಗ ಇರುತ್ತದೆ. ಪ್ರತಿವಾದ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ವಾದಿಯ ಆಜುಬಾಜುವಿನಲ್ಲಿ ಮೂರು ಮನೆಗಳು ಇವೆ. ನನ್ನ ವಕೀಲರಿಗೆ ವಾದಿಯ ಮನೆಯ ಬಳಿ ಯಾರ ಮನೆ ಇದೆ ಎಂದು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆದರೆ ಸದ್ರಿ ಜಾಗದಲ್ಲಿ ನಿರ್ದಿಷ್ಟವಾಗಿ ಯಾರ ಮನೆ ಇದೆ ಎಂದು ಮಾಹಿತಿಯನ್ನು ನೀಡಿರುವುದಿಲ್ಲ.

ವಾದಿಯ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕಿನಲ್ಲಿ ಮೂರು ಮನೆಗಳು ಇವೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟವಾಗಿ ಯಾರ ಮನೆಯು ಯಾವ ದಿಕ್ಕಿನಲ್ಲಿ ಇದೆ ಎನ್ನುವ ಕುರಿತಾಗಿ ಬರೆದಿರುವುದಿಲ್ಲ. ವಾದಿಯನ್ನು ಹೊರತುಪಡಿಸಿ ಉಳಿದವರು ಎಷ್ಟು ವರ್ಷಗಳಿಂದ ಸದ್ರಿ ಜಾಗದಲ್ಲಿ ವಾಸವಾಗಿದ್ದಾರೆ ಎನ್ನುವ ಕುರಿತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ವಾದಿಯ ಮನೆಗೆ ಒಂದು ಮನೆಯು ಹತ್ತಿರದಲ್ಲಿದ್ದು, ಉಳಿದ ಮನೆಗಳು ಸುಮಾರು ಅಂದಾಜು 100 ಮೀಟರ ಅಂತರದಲ್ಲಿ ಇದೆ. ದಾವಾ ಸ್ಥಳದ ಹತ್ತಿರ ಇರುವ ಡಾಂಬರ ರಸ್ತೆಯು ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಇರುತ್ತವೆ. ಸದ್ರಿ ರಸ್ತೆಯು ಸುಮಾರು 1 ಕಿ.ಮೀ. ದೂರದಲ್ಲಿ ಇದೆ.

**ಮೂ.ದಾ.ನಂ.90/2017**

ಪಿ.ಡಬ್ಲ್ಯು.1

ಹೆಗಡೆಯಿಂದ ವಾದಿಯ ಮನೆಗೆ ಅಂದಾಜು 400 ಮೀಟರ ದೂರದಲ್ಲಿ ಇದೆ. ಸದ್ರಿ ರಸ್ತೆಯು 2017 ನೇ ಸಾಲಿನಲ್ಲಿ ವಾದಿಯ ಮನೆಗಿಂತ 100 ಮೀಟರ ಮುಂದೆ ಹೋಗಿರುತ್ತದೆ. ಈ ದಾವೆಗೆ ಪ್ರತಿವಾದ ಪತ್ರವನ್ನು ನಮ್ಮ ಊರಿನವರು ಎಲ್ಲರೂ ಸೇರಿ ಹಾಕಿರುತ್ತೇವೆ. ಈ ದಾವೆಗೆ ಪ್ರತಿವಾದ ಪತ್ರವನ್ನು 6 ನೇ ಪ್ರತಿವಾದಿಯು ಹಾಕಿದ್ದು ನಾವೆಲ್ಲರೂ ಅದನ್ನು ಅಳವಡಿಸಿಕೊಂಡಿರುತ್ತೇವೆ. ಡಾಂಬರ ರಸ್ತೆಯನ್ನು ಜಿಲ್ಲಾ ಪಂಚಾಯತನವರು ಹಾಕಿರಬಹುದು. ಅದರ ಕುರಿತಾಗಿ ನನಗೆ ನಿರ್ದಿಷ್ಟವಾದ ಮಾಹಿತಿ ಇಲ್ಲ. ಸದ್ರಿ ರಸ್ತೆಗೆ ಎಷ್ಟು ಹಣ ಖರ್ಚಾಗಿದೆ ಎಂಬ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದ್ರಿ ರಸ್ತೆಯು 12 ಪೂಟು ಅಗಲದ ರಸ್ತೆ ಆಗಿರುತ್ತದೆ. ಈ ಕುರಿತಾಗಿ ನಮ್ಮ ಗ್ರಾಮ ಪಂಚಾಯತನಲ್ಲಿ ಠರಾವ ಆದ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದ್ರಿ ಸಮಯದಲ್ಲಿ ಪ್ರತಿವಾದಿ ನಂ. 3 ರವರು ನಮ್ಮ ಗ್ರಾಮ ಪಂಚಾಯತನ ಅಧ್ಯಕ್ಷರಾಗಿರುತ್ತಾರೆ.

ವಾದಿಯರು ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದಾರೋ ಎಂದು ನಾವು ಪಂಚಾಯತಗೆ ಹೋಗಿ ವಿಚಾರಿಸಿದ್ದು, ಈ ಕುರಿತಾಗಿ ಪಂಚಾಯತನವರು ಮೌಖಿಕವಾಗಿ ವಾದಿಯರು ಪರವಾನಿಗೆ ತೆಗೆದುಕೊಂಡಿಲ್ಲ ಎಂದು ತಿಳಿಸಿರುತ್ತಾರೆ. ನಾವು ಈ ವಿಷಯದ ಕುರಿತಾಗಿ ಪಂಚಾಯತಗೆ ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿಯನ್ನು ನೀಡಿರುವುದಿಲ್ಲ. ಸರಕಾರದಿಂದ ಅಕ್ರಮ ಸಕ್ರಮದ ಕುರಿತಾಗಿ ಆದ ಅಧಿಸೂಚನೆಯ ಕುರಿತಾಗಿ ಯಾವುದೇ ಮಾಹಿತಿ ಇಲ್ಲ. ಕಲ್ಲಗೋಡ ಗ್ರಾಮವು ವಾದಿಯ ಮನೆಯಿಂದ ಪ್ರಾರಂಭಗೊಳ್ಳುತ್ತದೆ. ವಾದಿಯ ಮನೆಯ ಸುತ್ತಮೂತ್ತ ನಾನು ಮೇಲೆ ಹೇಳಿದ ಮೂರು ಮನೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಮನೆಗಳು ಇರುವುದಿಲ್ಲ.

**ಮೂ.ದಾ.ನಂ.90/2017**

ಪಿ.ಡಬ್ಲ್ಯು.1

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ